ಮಗಳೇ ಇರಬಹುದು ಮುನ್ನ... ಆದರೆ ಎಷ್ಟು ಕಾಲ ಹೊರಬರಲಾರದ ಈ ಸಮಸ್ಯೆಯಿಂದ ಕುಸುಮಾ ಬಳಲಬಹುದು ಎಂದುಕೊಳ್ಳುತ್ತಿದ್ದೆ.

ಮನೆಬಾಡಿಗೆ ಕೊಟ್ಟು, ಜೀವನ ನಿರ್ವಹಣೆ ಮಾಡೋದು ಕಷ್ಟವೆಂದು ಹಳ್ಳಿಗೆ ಹೋಗಿ ಅಣ್ಣನ ಮನೆಯಲ್ಲಿರುವುದೆಂದು ನಿರ್ಧರಿಸಿ ಕುಸುಮಾ ಹೊರಟು ಹೋದಳು. ಐದುವರ್ಷದ ಮಗಳನ್ನು ಹೆಗಲಿಗೇರಿಸಿಕೊಂಡು ಅವಳು ಬಸ್ಸು ಹತ್ತಿ ಹೋಗುವವರೆಗೂ ಅವಳ ಜೊತೆಯಾಗಿದ್ದೆ. ಗಂಡ ಎನ್ನಿಸಿಕೊಂಡವನು ಅವಳ ಬೆನ್ನ ಹಿಂದೆ ಬಸ್ಸು ಹತ್ತಿ ಆರಾಮವಾಗಿ ಬಸ್ಸಿನ ಸೀಟಿನಲ್ಲಿ ಕುಳಿತುಕೊಂಡಿದ್ದನ್ನು ನೋಡಿ ಹಿಂತಿರುಗಿದ್ದೆ. ಬಸ್ಸು ಹೊರಡುವಾಗ ಅವಳು, 'ಬಾಯ್... ಊರಿಗೆ ಬಾ' ಎಂದಾಗ ನನ್ನ ಕಣ್ಣಲ್ಲಿ ನೀರಿಳಿದಿತ್ತು. ಆದರೆ ಅವಳು ಅಳಲಿಲ್ಲ. ಅವಳ ದೃಷ್ಟಿ ಮುನ್ನಾಳತ್ತ ಸರಿದು ಅವಳು ಅದಕ್ಕೆ ಲೊಚಲೊಚನೆ ಮುತ್ತಿಡುವುದರಲ್ಲಿ ತೊಡಗಿದ್ದಳು. ನಾನು ಮಾತ್ರ ಅದನ್ನು ನೋಡಿ ಅನ್ಯಮನಸ್ಕಳಾಗಿ ಮನೆಗೆ ಬಂದೆ. ಹಳ್ಳಿಗೆ ಹೋಗಿ ಸೇರಿದ ಅವಳು ಕಾಗದ ಬರೆದಿದ್ದಳು. ಅಂಥ ಕಾಗದಗಳು ಅವಳಿಂದ ನನಗೆ ಪದೇಪದೇ ಬರುತ್ತಿದ್ದವು. ಯಾವುದರಲ್ಲಿ ನೋಡಿದರೂ ಮುನ್ನಾಳ ವಿಚಾರವೇ ತುಂಬಿರುತ್ತಿತ್ತು. ನಾನು ಓದಿ ಅದನ್ನು ಜೋಪಾನವಾಗಿ ತೆಗೆದಿರಿಸುತ್ತಿದ್ದೆ.

ಈಗ ಅವಳು ಹಳ್ಳಿಗೆ ಹೋಗಿ ಹತ್ತು ವರ್ಷ ಗತಿಸಿರಬಹುದು. ಮೊನ್ನೆ ಮೊನ್ನೆ ಅವಳಿಂದ ಸುದೀರ್ಘವಾದ ಒಂದು ಪತ್ರ ಬಂತು. ಮುನ್ನಾ ಮೈನೆರೆದಿದ್ದಾಳೆ ಎಂದು ಬರೆದಿದ್ದಳು. ಪ್ರಕೃತಿ ಸಹಜ ಕ್ರಿಯೆ ಅದು. ನನಗೇನೂ ಬೇಸರವಿಲ್ಲ. ಎಂದಿನಂತೆ ಮುನ್ನಾಳ ಸೇವೆಯನ್ನು ನಿರಾತಂಕವಾಗಿ ಮಾಡುತ್ತಿದ್ದೇನೆ. ಮುಜುಗರವಿಲ್ಲ, ಮುಟ್ಟಿನ ಬಟ್ಟೆ ಬದಲಾಯಿಸುತ್ತೇನೆ. ತೊಳೆದು ಶುಚಿಗೊಳಿಸುತ್ತೇನೆ. ಅವಳಿಗೇನು ತಿಳಿಯುತ್ತದೆ. ಚಂದನದ ಗೊಂಬೆ ಅವಳು. ಅವಳ ಅಂದಕ್ಕೆ ಅವಳ ರೂಪಕ್ಕೆ ಬೆರಗಾಗುತ್ತ ಒಮ್ಮೊಮ್ಮೊ ಯೋಚಿಸುತ್ತೇನೆ, ಅವಳು ಎಲ್ಲರಂತಿರುತ್ತಿದ್ದರೆ, ನನ್ನನ್ನು ಹಿಡಿಯುವವರಿದ್ದರೆ ಎನಿಸುತ್ತದೆ.

ಅಣ್ಣನ ಮನೆಯಲ್ಲಿ ಸುಖವಾಗಿದ್ದೇನೆ. ಎರಡು ಹೊತ್ತಿನ ಊಟಕ್ಕೆ ಕೊರತೆ ಇಲ್ಲ. ಅಣ್ಣನಿಗೆ ಜಮೀನಿದೆ. ಅವರನ್ನು ಒತ್ತಾಯ ಮಾಡಿ ದುಡಿದು ಬನ್ನಿ ಎಂದು ಕಳಿಸುತ್ತೇನೆ. ಬೆಂಗಳೂರಿನಲ್ಲಿದ್ದಾಗ ಹೇಳದೆ ಕೇಳದೆ ಹೋಗುತ್ತಿದ್ದಂತೆ ಈಗಲೂ ಹೋಗುವುದನ್ನು ಬಿಟ್ಟಿಲ್ಲ. ಬೇರೆ ಯಾರಾದರು ಆಗಿದ್ದರೆ ಹೊಟ್ಟೆ ತುಂಬ ಊಟ ಹಾಕುತ್ತಿರಲಿಲ್ಲ. ಅಣ್ಣ ಒಳ್ಳೆಯವನು; ನಮ್ಮ ಸಂಸಾರವನ್ನು ಚೆನ್ನಾಗಿಯೇ ನೋಡಿಕೊಳ್ಳುತ್ತಿದ್ದಾನೆ. ಅತ್ತಿಗೆಯ ಬೈಗಳ ಕೇಳಬೇಕು ವಿಧಿಯಿಲ್ಲ. ನಮ್ಮ ಮುನ್ನಾಳನ್ನು ನೋಡಲು ಒಮ್ಮೆಯಾದರೂ ಬಂದು ಹೋಗು ಎಂದು ಬರೆದಿದ್ದಳು. ನಾನು ಅವಳ ಕಾಗದಕ್ಕೆ ಉತ್ತರಿಸುವಾಗ ಎಂದಾದರೂ ಒಮ್ಮೆ ಬಂದೇ ಬರುತ್ತೇನೆ ಎಂದು ಬರೆದಿದ್ದೆ. ಆದರೆ ಅದೇಕೋ ನನಗೆ ಹಳ್ಳಿಗೆ ಹೋಗಲು ಸಾಧ್ಯವಾಗಿರಲಿಲ್ಲ.

ನನ್ನ ಮಗಳನ್ನು ಸೂರತ್ಕಲ್ ಎಂಜಿನಿಯರಿಂಗ್ ಕಾಲೇಜಿಗೆ ಸೇರಿಸಿ ಬರಲು ನಾನು ಮತ್ತು ನನ್ನ ಮದನ ಹೋಗುವವರಿದ್ದೆವು. ಅದ್ದರಿಂದ ಕುಸುಮಾಳಿಗೆ ನಿನ್ನ ಹಳ್ಳಿಗೆ ಮುನ್ನಾಳನ್ನು ನೋಡಲು ಬರುತ್ತೇವೆ ಎಂದು ಬರೆದಿದ್ದೆ. ಹೇಳಿದಂತೆ ನಾನು ಮತ್ತು ಮದನ ಅವಳ ಹಳ್ಳಿಗೆ ಹೋದೆವು. ಅವಳಿಗೆ ಅವಳ ಅಣ್ಣ ವಾಸಕ್ಕಿರಲೆಂದು, ಒಂದು ಶೆಡ್ಡನ್ನು ದಯಪಾಲಿಸಿದ್ದ. ಅದನ್ನು ಶೆಡ್ಡು ಎನ್ನುವುದಕ್ಕಿಂತ ಮೇಲ್ಛಾವಣಿಗೆ ಹೆಂಚು ಹೊದೆಸಿದ ಒಂದು ಪುಟ್ಟ ಗುಡಿಸಲು ಎನ್ನ ಬಹುದೇನೊ? ಒಳಗೆ ಕಾಲಿಟ್ಟರೆ ಗುಂಯಿ ಗುಡುವ ಕತ್ತಲೆ. ಸುತರಾಂ ಗಾಳಿ ಬೆಳಕಿಲ್ಲದ ಅದೊಂದು ಪುಟ್ಟ ಗುಡಿಸಲು. ಹಗಲಲ್ಲೇ ವಿದ್ಯುತ್ ದೀಪ ಹಚ್ಚಿಕೊಂಡು ಓಡಾಡಬೇಕು.